# ಗೋಡೆ

ಗೋಡೆಗಳನ್ನು ಕಟ್ಟುವ ಹಾಗೂ ಗೋಡೆಗಳನ್ನು ಕೆಡಹುವ ನಿರಂತರ ಪ್ರಕ್ರಿಯೆ ನಾಗರಿಕತೆಯ ಲಕ್ಷಣಗಳಲ್ಲೊಂದು. ಪುರಾಣ ಮತ್ತು ಇತಿಹಾಸದಲ್ಲಿ ತುಂಬಿ ತುಳುಕುವ ಭವ್ಯ ಗೋಡೆಗಳು ಹಾಗೂ ಅವುಗಳ ಭಗ್ನಾವಶೇಷಗಳ ಕಥನಗಳು ಗೋಡೆಗಳ ಮೇಲಿನ ಮನುಷ್ಯನ ಕುತೂಹಲವನ್ನು ಮನವರಿಕೆ ಮಾಡುವಂತಿವೆ. ವರ್ತಮಾನದಲ್ಲಂತೂ ಅಗಣಿತ ಗೋಡೆಗಳು!

ಗೋಡೆಗಳ ಸಂಕಥನವನ್ನು ಹೀಗೂ ಹೇಳಬಹುದು: ಪ್ರಭುತ್ವ ಗೋಡೆಗಳನ್ನು ಕಟ್ಟುತ್ತದೆ; ಜನಸಾಮಾನ್ಯರು ಗೋಡೆಗಳನ್ನು ಒಡೆಯುತ್ತಾರೆ. ಪ್ರಭುತ್ವವೊಂದರ ಹಿರಿಮೆಯನ್ನು ಸಾರಲು ಗೋಡೆಯೊಂದು ರೂಪುಗೊಳ್ಳುವಂತೆಯೇ, ಪ್ರಭುತ್ವದ ವೈಫಲ್ಯಗಳನ್ನು ಮರೆಮಾಚಲಿಕ್ಕಾಗಿಯೂ ಗೋಡೆಗಳು ಎದ್ದುನಿಲ್ಲುತ್ತವೆ. ಪ್ರಭುತ್ವಕ್ಕೆ ಶತ್ರುಭಯ. ಕೋಟೆ ಕೊತ್ತಲಗಳೆಲ್ಲವೂ ಗೋಡೆಗಳೇ. ಒಂದು ಗೋಡೆ ಪ್ರಭುತ್ವವೊಂದರ ಎಲ್ಲೆಯನ್ನು ಗುರ್ತಿಸುವಂತೆಯೇ, ಶತ್ರುಗಳು ಗಡಿ ದಾಟದಂತೆ ರಕ್ಷಣೆಯನ್ನೂ ಒದಗಿಸುತ್ತದೆ. ಈ ಗೋಡೆಗೆ ಕಂಡಿಕೊರೆಯುವ ಮೂಲಕ ಪ್ರಭುತ್ವವನ್ನು ಶಿಥಿಲಗೊಳಿಸುವ ಪ್ರಯತ್ನಗಳು ಗೋಡೆಯ ಎರಡೂ ಬದಿಯಲ್ಲಿ ನಡೆಯುತ್ತಿರುತ್ತವೆ, ಅದುವೇ ಇತಿಹಾಸ–ವರ್ತಮಾನ.

ಗೋಡೆ ಬಂಧನವೂ ಹೌದು ಎನ್ನುವುದಕ್ಕೆ ನಿದರ್ಶನವನ್ನಾಗಿ ಜೈಲುಗಳನ್ನು ನೋಡಬೇಕು. ಕಾನೂನು ಸುವ್ಯವಸ್ಥೆ ಹೆಸರಿನಲ್ಲಿ ಎತ್ತರದ ಗೋಡೆಗಳ ಕಾರಾಗೃಹಗಳನ್ನು ಪ್ರಭುತ್ವ ನಿರ್ಮಿಸುತ್ತದೆ. ಗೋಡೆಗಳಾಚೆಗಿನ ಗಾಳಿಬೆಳಕಿನಲ್ಲಿ ಮೀಯಲು ಹಂಬಲಿಸುತ್ತ, ಗೋಡೆಗಳನ್ನು ಹಾರುವ ಹಂಬಲದಲ್ಲೇ ಕೈದಿಯ ಬದುಕು ಹಣ್ಣಾಗುತ್ತದೆ. ಪ್ರಭುತ್ವ ಕಟ್ಟಿದ ಗೋಡೆ ಜನಸಾಮಾನ್ಯರ ಪಾಲಿಗೆ ಹೆಮ್ಮೆಯ ಸ್ಥಾವರವಾಗಿ ಕಾಣಿಸಬಹುದು. ಆದರೆ, ಆ ಗೋಡೆಗಳನ್ನು ಜಿಗಿಯುವುದರಲ್ಲಿ ಕೆಲವರಿಗೆ ಸುಖ. ಗೋಡೆಗಳನ್ನು ಮೀರುವ ಹಂಬಲ ಸೃಜನಶೀಲತೆಯ ರೂಪದಲ್ಲಿರಬಹುದು, ಸ್ವಾತಂತ್ರ್ಯದ ರೂಪದಲ್ಲೂ ಇರಬಹುದು. ಈ ಉಲ್ಲಂಘನೆಯ ಕೆಲವು ಕಥನಗಳು ಕ್ರಾಂತಿಯ ಕಿಡಿಗಳಾಗಿ ಚರಿತ್ರೆಯಲ್ಲಿ ಉಳಿದಿವೆ. ಇದಕ್ಕೆ ಅತ್ಯುತ್ತಮ ಉದಾಹರಣೆ ಕನಕದಾಸರದು. ಕೃಷ್ಣದೇಗುಲಕ್ಕೆ ಪ್ರವೇಶ ದೊರೆಯದೆ ಹೋದಾಗ, ಗರ್ಭಗುಡಿಯಲ್ಲಿನ ಕೃಷ್ಣ ತಿರುಗುಮುರುಗಾದ; ಗೋಡೆಯನ್ನು ಭಂಗಗೊಳಿಸಿ ಕಿಂಡಿಯ ಮೂಲಕ ಕನಕನಿಗೆ ದರ್ಶನ ನೀಡಿದ. 'ಕನಕನಕಿಂಡಿ' ಭಕ್ತಿಕಥನವಷ್ಟೇ ಅಲ್ಲ; ಭಕ್ತಿಯ ಹೆಸರಿನ ಬಂಡಾಯದ ಸಂಕೇತವೂ ಹೌದು; ಸಮಾಜದಲ್ಲಿನ ಜಾತಿಗೋಡೆಗಳನ್ನು ಒಡೆಯುವ ಪ್ರಯತ್ನವೂ ಹೌದು. ತರತಮದ ಗೋಡೆಗಳು ಬಲಗೊಂಡಾಗಲೆಲ್ಲ, ಅವುಗಳನ್ನು ಒಡೆಯುವ 'ಗೋಡೆಭಂಗ'ದ ಪ್ರಯತ್ನಗಳು ಜನರ ನಡುವಿನಿಂದಲೇ ರೂಪುಗೊಳ್ಳುತ್ತವೆ. ಬುದ್ಧ, ಬಸವಣ್ಣ, ಗಾಂಧೀಜಿ, ಅಂಬೇಡ್ಕರ್ – ಇವರೆಲ್ಲರ ಬದುಕು ಮನುಷ್ಯರ ನಡುವಿನ ಗೋಡೆಗಳನ್ನು ಭಂಗಗೊಳಿಸುವುದಕ್ಕೆ ಮೀಸಲಾಗಿತ್ತು. ಈ ಮಹಾತ್ಮರೇ ಈಗಲೂ ಗೋಡೆ ಒಡೆಯುವವರ ಪಾಲಿಗೆ ಉಳಿ, ಸುತ್ತಿಗೆಗಳು.

ಭಾರತದ ಜಲಿಯನ್ ವಾಲಾಬಾಗ್‌ನ ರಕ್ತಸಿಕ್ತ ಗೋಡೆಗಳು ಪ್ರಭುತ್ವದ ಕ್ರೌರ್ಯಕ್ಕೆ ನಿದರ್ಶನದಂತಿವೆ. ಚೀನಾದ ಗೋಡೆ ಹಾಗೂ ಬರ್ಲಿನ್ ಗೋಡೆ ವಿಶ್ವಪ್ರಸಿದ್ಧ ಸ್ಥಾವರಗಳು. ಎರಡೂ ಈಗ ಅವಶೇಷಗಳು. ಚೀನಾದ ಗೋಡೆಯನ್ನು ಕಾಲವೇ ಮುಕ್ಕಾಗಿಸಿದೆ. ಬರ್ಲಿನ್ ಗೋಡೆಯನ್ನು ಜರ್ಮನ್ನರೇ ಮೀರಿದ್ದಾರೆ. ಪ್ರಭುತ್ವ ಕಟ್ಟಿದ ಗೋಡೆಗಳು ಮನಸ್ಸುಗಳಿಗೆ ಕಟ್ಟಿದ ಗೋಡೆಗಳು ಎನ್ನುವ ಭಾವನೆ ಬಲಗೊಂಡಾಗ, ಬರ್ಲಿನ್ ಗೋಡೆ ಮುರಿದುಬಿತ್ತು. ಗೋಡೆಗಳನ್ನು ಮೀರುವುದರಲ್ಲಿ, ಗೋಡೆಗಳಿಗೆ ಕಂಡಿಗಳನ್ನು ಕೊರೆಯುವುದರಲ್ಲಿ, ಗೋಡೆಗಳಿಗೆ ಕಿವಿಯಾಗುವುದರಲ್ಲಿ, ಜನಸಾಮಾನ್ಯರಿಗೆ ವಿಚಿತ್ರ ಖುಷಿ, ಕುತೂಹಲ.

ಗೋಡೆಗಳೆಂದರೆ ಕಲ್ಲು ಮಣ್ಣು ಸಿಮೆಂಟುಗಳ ಅಡೆತಡೆಗಳು, ಸ್ಥಾವರಗಳಷ್ಟೇ. ಇವು ಭಾವನೆಗಳ ರೂಪದಲ್ಲೂ ಅಸ್ತಿತ್ವದಲ್ಲಿರುತ್ತವೆ. ವ್ಯಕ್ತಿ ವ್ಯಕ್ತಿಯ ನಡುವೆ ಗೋಡೆ ರೂಪುಗೊಳ್ಳಬಹುದು. ಊರಿಗೂ ಕೇರಿಗೂ ನಡುವೆ, ಸಮುದಾಯಗಳ ನಡುವೆ, ದೇಶಗಳ ನಡುವೆ ಗೋಡೆಗಳು ಎದ್ದುನಿಲ್ಲಬಹುದು. ಬಹುತೇಕ ಸಂದರ್ಭದಲ್ಲವು ಅಗೋಚರವಾಗಿರುತ್ತವೆ. ಕಣ್ಣಿಗೆ ಕಾಣುವ ಹಾಗೂ ಕಾಣದ ಅಸಂಖ್ಯ ಗೋಡೆಗೋರಿಗಳನ್ನು ತುಂಬಿಕೊಂಡಿರುವ ಇಡೀ ಭೂಗೋಳವೇ ಬ್ರಹ್ಮಾಂಡದ ಪಾಲಿಗೆ ಒಂದು ಮೋಟುಗೋಡೆ ಇರಬಹುದೆ?

ಗೋಡೆಗಳೀಗ ಡಿಜಿಟಲ್ ಸ್ವರೂಪವನ್ನು ಪಡೆದುಕೊಂಡಿವೆ. ಡಿಜಿಟಲ್ ತಂತ್ರಜ್ಞಾನ ಜಗತ್ತನ್ನು ಬೆರಳ ತುದಿಗೆ ಎಟುಕಿಸಿದೆ. ವಿಶ್ವಮಾನವ ಪರಿಕಲ್ಪನೆಗೆ ಜೀವ ತಂದುಕೊಟ್ಟಿದೆ. ಗಣೇಶಪ್ರಜ್ಞೆಯ ಮೂರ್ತರೂಪದಂತಿದೆ. ಹೀಗೆ, ಗೋಡೆಗಳೇ ಇಲ್ಲದಂತೆ ಕಾಣಿಸುವ ಡಿಜಿಟಲ್ ತಂತ್ರಜ್ಞಾನ ಸ್ವತಃ ತಾನೇ ಒಂದು ದೈತ್ಯ ಗೋಡೆಯಾಗಿಯೂ ಪರಿಣಮಿಸಿದೆ. ಡಿಜಿಟಲ್ ತೆಕ್ಕೆಗೆ ಒಪ್ಪಿಸಿಕೊಂಡ ವ್ಯಕ್ತಿಯೊಬ್ಬ ವಾಸ್ತವದ ಜಗತ್ತಿನಲ್ಲಿ ನಿರ್ಮಿಸಿಕೊಂಡ ಗೋಡೆಗಳು ಗಾಬರಿ ಹುಟ್ಟಿಸುವಂತಿರುತ್ತವೆ. ಈ ಗೋಡೆಗಳು ಕುಟುಂಬದ ಸದಸ್ಯರ ನಡುವೆ, ಗಂಡ ಹೆಂಡತಿಯ ನಡುವೆ, ತಾಯಿ ಮಕ್ಕಳ ನಡುವೆ, ಸ್ನೇಹಿತರ ನಡುವೆ ಎದ್ದುನಿಂತಿರುವ ದಿನಗಳಿವು. ಡಿಜಿಟಲ್ ಲೋಕದಲ್ಲಿ ವಿಶ್ವದೆಲ್ಲೆಡೆ ಸ್ನೇಹಿತರಿದ್ದರೂ, ಅನುದಿನದ ವೈತರಣಿಯ ದಾಟಲಿಕ್ಕೆ ಒಂದು ಜೀವದ ಆಸರೆಯೂ ಇಲ್ಲದಿರುವವರನ್ನು ಎಲ್ಲಿಯೋ ಹುಡುಕಬೇಕಿಲ್ಲ; ಆ ನತದೃಷ್ಟರು ನಾವೇ ಆಗಿರಲೂಬಹುದು. ಈ ವೈರುಧ್ಯವೇ ಖಿನ್ನತೆಯ ಗೋಡೆಯ ಬುಡಕ್ಕೆ ತಂದು ನಮ್ಮನ್ನು ನಿಲ್ಲಿಸುವುದು.

'ಹತ್ತಿರವಿದ್ದೂ ದೂರ ನಿಲ್ಲುವೆವು ನಮ್ಮ ಅಹಮ್ಮಿನ ಕೋಟೆಯಲಿ' ಎನ್ನುತ್ತಾರೆ ಜಿ.ಎಸ್. ಶಿವರುದ್ರಪ್ಪ. ಅಹಂಕಾರವೂ ಒಂದು ಗೋಡೆ! ನಾವು ಬದುಕುತ್ತಿರುವ ಕಾಲ, ಪ್ರತಿ ಕ್ಷಣವೂ ಸಾವಿನ ಸಾಕ್ಷಾತ್ಕಾರವನ್ನು ಕಾಣಿಸುತ್ತಿದೆ. ಬದುಕು ಯಾವುದೇ ಕ್ಷಣದಲ್ಲಿ ಕುಸಿಯಬಹುದಾದ ಇಸ್ಪೀಟೆಲೆಗಳ ಗೋಡೆ ಎನ್ನುವುದನ್ನು ಮನದಟ್ಟಾಡಿಸಲು ಕೊರೊನಾಕ್ಕಿಂತಲೂ ಬೇರೆ ಕನ್ನಡಿ ಬೇಕೆ? ಏನೆಲ್ಲ ಘಟಿಸಿದರೂ, ಗೋಡೆಗೆ ತಲೆ ಘಟ್ಟಿಸುವುದರಲ್ಲೇ ನಮಗೆ ಸುಖ. 'ನಾನು' ಎನ್ನುವ ಗೋಡೆಯನ್ನು ಮೀರುವ ಹಂಬಲದಲ್ಲಿ ಅಧ್ಯಾತ್ಮವನ್ನು ರೂಪಿಸಿಕೊಂಡೆವು; ಕೊನೆಗೆ ಅದನ್ನೂ ಸರಕಾಗಿಸಿದೆವು.

ತಾತ್ಪರ್ಯ ಇಷ್ಟು: ಮನುಷ್ಯನ ಒಟ್ಟಾರೆ ಬದುಕು ಗೋಡೆಗಳ ನಡುವೆ ಮುಗಿದುಹೋಗುವಂತಹದ್ದು. ಗೋಡೆಗಳನ್ನು ಮೀರುವ ಪ್ರಯತ್ನವನ್ನು ನಿರಂತರವಾಗಿ ನಡೆಸುತ್ತಲೇ, ತಿಳಿದೋ ತಿಳಿಯದೆಯೋ ಒಂದಷ್ಟು ಹೊಸ ಗೋಡೆಗಳನ್ನು ಪ್ರತಿಯೊಬ್ಬರೂ ಕಟ್ಟುತ್ತಲೇ ಇರುತ್ತೇವೆ. ಗೋಡೆಗಳ ಚೌಕಟ್ಟಿನಿಂದ ತಪ್ಪಿಸಿಕೊಳ್ಳಬೇಕೆನ್ನುವುದು ಎಲ್ಲ ಮನಸ್ಸುಗಳ ಹಂಬಲ. ಗೋಡೆಗಳಿಂದ ತಪ್ಪಿಸಿಕೊಳ್ಳಲಾಗದು ಎನ್ನುವುದು ವಾಸ್ತವ. ತಪ್ಪಿಸಿಕೊಳ್ಳಲಾಗದು ಎಂದು ತಿಳಿದರೂ ಗೋಡೆಗಳನ್ನು ಮೀರುವ ಪ್ರಯತ್ನ ಮಾಡದಿರಲಾಗದು. ಬದುಕಿನ ಕೊನೆಯಲ್ಲಿ ನಿಂತು ನೋಡಿದಾಗ, ನಮ್ಮ ಸುತ್ತಲೂ ಗೋಡೆಗಳಿರುತ್ತವೆ ಎನ್ನುವುದು ಸತ್ಯವಾದರೂ, ಆ ಗೋಡೆಗಳನ್ನು ಎಷ್ಟು ದೂರ ಸರಿಸಿದ್ದೇವೆ ಎನ್ನುವುದರಲ್ಲಿ ಜೀವನದ ಸಾರ್ಥಕತೆಯಿದೆ.

**■ ಚಂಪಕಮಾಲಾ**

## ಮಾತೇ ಮುತ್ತು

- ಕಾಲ ಹಿಂದಕ್ಕೆ ಚಲಿಸುವುದಿಲ್ಲ. ಅದರ ಜೊತೆಗೇ ಹೆಜ್ಜೆ ಹಾಕದಿದ್ದರೆ ನಾವು ನಿಂತಲ್ಲೇ ನಿಂತಿರಬೇಕಾಗುತ್ತದೆ.
  —ಕೆ. ಶಿವರಾಮ ಕಾರಂತ
- ಪ್ರತಿಫಲದ ಅಪೇಕ್ಷೆಯಿಲ್ಲದೆ ಕೇವಲ ಆತ್ಮತೃಪ್ತಿಗಾಗಿ ಕೆಲಸ ಮಾಡಿದಾಗ, ಮೋಸ ಹೋದಾಗಲೂ ದುಃಖವಾಗುವುದಿಲ್ಲ.
  —ಡಿ.ವಿ. ಗುಂಡಪ್ಪ
- ಭಾವನೆಗಳು, ಆಲೋಚನೆಗಳು ಇಲ್ಲದೆ ಮನುಷ್ಯನ ಮನಸ್ಸಿಗೆ ಅಸ್ತಿತ್ವವೇ ಇರುವುದಿಲ್ಲ.
  —ಪೂರ್ಣಚಂದ್ರ ತೇಜಸ್ವಿ
- ಜಾತಿ ಜಾತಿಯೊಳಗೆ ಜನಕೆಲ್ಲ ಹಗೆ, ಹೆರರಿಗಿದು ನಗೆ, ನಮಗಿದು ದಗೆ.
  —ಪಂಜೆ ಮಂಗೇಶರಾವ್
- ಸಂತೋಷ ಹೊರಗಿನಿಂದ ಬರುವುದಿಲ್ಲ. ಅದನ್ನು ನಮ್ಮ ಮನಸ್ಸಿನಲ್ಲಿ ಕಂಡುಕೊಳ್ಳಬೇಕು.
  —ಚದುರಂಗ